**<u>ದಿನಾಂಕ 21-01-2025 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>: ಪಾಟೀ ಸವಾಲುಃ  ಎದುರುದಾರರ ಪರ ಶ್ರೀ. ಎಂ ಎಂ ಎಂ  ವಕೀಲರಿಂದ :</u>

ನನ್ನ ಪೂರ್ಣ ಹೆಸರು ಎ ಚನ್ನಯ್ಯ ಎಂಬುದು ಆಗಿರುತ್ತದೆ, ನನ್ನ ಹೆಸರು ಚೆನ್ನಯ್ಯ ಎಂದು ಆಗಿರುವುದಿಲ್ಲ. ನಾನು ನನ್ನ ಜಮೀನಿನ ಸಂಬಂಧವಾಗಿ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ಈ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ತೀರ್ಪು ಆಗಿರುವುದಿಲ್ಲ. ಆ ತೀರ್ಪಿನ ವಿರುದ್ಧ ಈ ಮೇಲ್ಮನವಿಯನ್ನು ಸಲ್ಲಿರುತ್ತೇನೆ. ಆ ತೀರ್ಪು ಯಾವ ದಿನಾಂಕದಂದು ಆಯಿತು ಎಂದು ಈಗ ನನಗೆ ಗೊತ್ತಿರುವುದಿಲ್ಲ. ಕೆಳ ನ್ಯಾಯಾಲಯದ ಮುಂದೆ ನಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದೇನು ಎಂದರೆ ಸರಿ. ಆ ಕೆಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ ದಿನಾಂಕದಿಂದ ತೀರ್ಪು ಹೊರ ಬರುವವರೆಗೂ ಸಹ ಆ ಕೇಸಿನ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಮತ್ತು ನಮ್ಮ ವಕೀಲರಿಗೆ ಮಾಹಿತಿ ಇತ್ತು. ಆ ಪ್ರಕರಣ ದಿನಾಂಕ **09.12.2021** ರಂದು ತೀರ್ಪು ಹೊರ ಬಂದಿದ್ದು ಈ ವಿಚಾರವೂ ಸಹ ನನಗೆ ಗೊತ್ತು.  ಈ ಮೇಲ್ಮನವಿಯನ್ನು ದಿನಾಂಕ

**26.06.2023** ರಂದು ಸಲ್ಲಿಸಿರುತ್ತೇನೆ. ಈ ಮೇಲ್ಮನವಿಯನ್ನು ತೀರ್ಪು ಹೊರ ಬಂದ **1** ವರ್ಷದ **6** ತಿಂಗಳ **15** ದಿನ ತಡವಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ ಸಾಕ್ಷಿಯು ನನಗೆ ಹುಷಾರಿಲ್ಲದ ಕಾರಣ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ನನ್ನ ಸಾಕ್ಷ್ಯಪಮಾಣ ಪತ್ರವನ್ನು ಬರೆಯಲು ನಮ್ಮ ವಕೀಲರೆ ಮಾಹಿತಿ ನೀಡಿದರು. ನನ್ನ ಸಾಕ್ಷ್ಯಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಾನು ಆ ತೀರ್ಪಿನ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಅಂಶಗಳ ಆಧಾರದ ಮೇಲೆ ನನ್ನ ಸಾಕ್ಷ್ಯಪಮಾಣ ಪತ್ರ ಸಲ್ಲಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣ ನಾನು ಸುಳ್ಳು ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸೃಷ್ಟಿಸಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಮೇಲ್ಮನವಿಯನ್ನು ನಾನು ಮತ್ತು **1** ನೇ ಮೇಲ್ಮನವಿದಾರರು ಕೂಡಿಯೇ ಸಲ್ಲಿಸಿದ್ದೆವೆ ಎಂದರೆ ಸರಿಯಲ್ಲ. ಕೆಳ ನಾಯಾಲಯದಲ್ಲಿ ದಾವೆ ವಿಚಾರಣೆ ಇದ್ದ ಸಂದರ್ಭದಲ್ಲಿ **1** ನೇ ಮೇಲ್ಮನವಿದಾರರು ಆ ನ್ಯಾಯಾಲಯಕ್ಕೆ ಹಾಜರಾಗಿದ್ದರು ಎಂದರೆ ಸರಿಯಲ್ಲ. ಆ ಕೇಸಿನಲ್ಲಿ **1** ನೇ ಮೇಲ್ಮನವಿದಾರರ ಹಾಜರಾಗಿ ಪ್ರಕರಣ ನಡೆಸಿರುವುದರಿಂದ ಆ ತೀರ್ಪಿನ ಬಗ್ಗೆ ಆತನಿಗೂ ಮಾಹಿತಿ ಇತ್ತು ಎಂದರೆ ಸರಿಯಲ್ಲ. **1** ನೇ ಮೇಲ್ಮನವಿದಾರರು ಸಹ ತಡವಾಗಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ಸೂಕ್ತ ಕಾರಣಗಳನ್ನು ತಿಳಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ವೈದ್ಯಕೀಯ ಪ್ರಮಾಣ ಪತ್ರಗಳು ನನಗೆ ಸಂಬಂಧಿಸಿದ್ದವು ಎಂದರೆ ಸರಿಯಲ್ಲ. ಅದರಲ್ಲಿ ನನ್ನ ಹೆಸರು, ನನ್ನ ತಂದೆಯ ಹೆಸರು ಮತ್ತು ವಿಳಾಸ ಸರಿಯಾಗಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಕೇಸ್ ಶೀಟ ಹಾಜರು ಪಡಿಸಿಲ್ಲ. ನಾನು ದಿನಾಂಕ **13.07.2022** ರಂದು ತೀರ್ಪಿನ ಪ್ರತಿ ಪಡೆದುಕೊಂಡಿರುತ್ತೇನೆಂದು ತಿಳಿಸಿರುತ್ತೇನೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ನಿಪಿ-2 ರಲ್ಲಿ ದಿನಾಂಕ **12.10.2022** ರಿಂದ **20.05.2023** ರವರೆಗೆ ವಿಶ್ರಾಂತಿ ಪಡೆದುಕೊಳ್ಳುತ್ತಿರುವ ಬಗ್ಗೆ ನಮೂದು ಆಗಿದೆ ಎಂದರೆ ಸರಿ. ನನಗೆ ಕೆಳೆ ನ್ಯಾಯಾಲಯದ ತೀರ್ಪಿನ ಬಗ್ಗೆ ಮಾಹಿತಿ ಇದ್ದರೂ ಸಹ ಸುಳ್ಳು ಅಂಶ ಗಳ ಆಧಾರದ ಮೇಲೆ ಈ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ವೈದ್ಯಕೀಯ ದೃಢೀಕರಣ ಪತ್ರ ನೀಡಿದ ವೈದ್ಯರನ್ನು ನ್ಯಾಯಾಲಯದ ಮುಂದೆ ವಿಚಾರಣೆ ನಡೆಸಲು ಯಾವುದೇ ತೊಂದರೆ ಇಲ್ಲ.

**: ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್